**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆ: ಸ್ಪೆಷಲ್ ಎಸ್.ವಿ.ಸಿ. 3/2020**

ಅಸಾ : 02
ಚಾಸಾ : 02

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರವೀಣಕುಮಾರ |
| ತಂದೆಯ ಹೆಸರು | : | ಶಿವಾಜಿ ಬಾಳಿಕಾಯಿ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ದ್ವಿ.ದ.ಸ., ಲೋಕೋಪಯೋಗಿ ಇಲಾಖೆ, ಹಾವೇರಿ |
| ವಾಸ ಸ್ಥಳ | : | ಹಾವೇರಿ. |

ದಿನಾಂಕ: **12/09/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ: –**

1. 2013 ರಿಂದ ನಾನು ಹಾವೇರಿಯ ಲೋಕೋಪಯೋಗಿ ಇಲಾಖೆ ಕಛೇರಿಯಲ್ಲಿ ದ್ವಿ.ದ.ಸ. ಎಂದು ಕೆಲಸ ಮಾಡುತ್ತಿದ್ದೇನೆ.

2. ಇಂದು ಹಾಜರಿರುವ ಆರೋಪಿಯನ್ನು ದಿನಾಂಕ:05/03/2019 ರಂದು ಹಿರೇಮಣಕಟ್ಟಿಯ ಗ್ರಾಮ ಪಂಚಾಯ್ತಿಯಲ್ಲಿ ನೋಡಿದ್ದೆ. ಆ ದಿನ ನಾನು ನನ್ನ ಕಾರ್ಯಾಲಯ ದಲ್ಲಿದ್ದಾಗ ಎಸಿಬಿ ಪೊಲೀಸರು ಪತ್ರ ಕಳಿಸಿದ್ದಾರೆ ಎಂದು ಹೇಳಿ, ಅಲ್ಲಿಗೆ ಹೋಗಲು ನನ್ನ ಮೇಲಾಧಿಕಾರಿ ತಿಳಿಸಿದರು. ನಾನು ಬೆಳಿಗ್ಗೆ 10.30 ಕ್ಕೆ ಎಸಿಬಿ ಕಾರ್ಯಾಲಯಕ್ಕೆ ಹೋದೆ. ಚಾಸಾ-1 ಪ್ರವೀಣ ಹುಡೇದ, ಚಾಸಾ-3 ಚಿನ್ಮಯ ಹಾಗೂ ಎಸಿಬಿ ಪೊಲೀಸರು ಹಾಜರಿದ್ದರು. ಪೊಲೀಸರು ನನ್ನನ್ನು ಮತ್ತು ಇತರರನ್ನು ಪರಸ್ಪರ ಪರಿಚಯಿಸಿದರು.

3. ಆರೋಪಿ ಕಿಲ್ಲೇದಾರ ಚಾಸಾ-1 ರಿಗೆ ಲಂಚ ಕೇಳಿದ್ದಾನೆಂದು ತಿಳಿಸಿದರು. ಆ ಕುರಿತು ಚಾಸಾ-1 ಮತ್ತು ಆರೋಪಿ ಪರಸ್ಪರ ಮಾತನಾಡಿರುವ ಧ್ವನಿ ಮುದ್ರಣ ಆಲಿಸಿದರು. ಸದರಿ ಧ್ವನಿ ಯನ್ನು ಆಲಿಸಿದರೆ ಗುರುತಿಸಬಲ್ಲೆ. (ಮಾನ್ಯ ವಿಶೇಷ ಅಭಿಯೋಜಕರ ವಿನಂತಿ ಮೇರೆಗೆ ಒಂದು ಸೀಲ್ಡ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿರುವ ಸಿಡಿಆರ್ ನ್ನು ಮುಮಾ-1 ಎಂದು ಗುರುತಿಸಿ, ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ಧ್ವನಿಯನ್ನು ಆಲಿಸಲು ಪ್ರಯತ್ನಿಸಲಾಯಿತು, ಯಾವುದೇ ಸಂಭಾಷಣೆ ಕಂಡುಬಂದಿಲ್ಲ. ಸಿಡಿಆರ್ ಖಾಲಿ ಇರುತ್ತದೆ).

4. ಎಸಿಬಿ ಪೊಲೀಸರು ನನಗೆ ರೂ.2,000/-ರ 1 ನೋಟು, ರೂ.500/-ರ 4 ನೋಟುಗಳನ್ನು ಕೊಟ್ಟು ಅವುಗಳ ಕ್ರಮಸಂಖ್ಯೆ ಬರೆದುಕೊಳ್ಳಲು ತಿಳಿಸಿದರು. ನಾನು ಸದರಿ ನೋಟುಗಳ ಕ್ರಮ ಸಂಖ್ಯೆ ಬರೆದುಕೊಂಡೆ. (ಸೀಲ್ಡ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಸ್ವತ್ತನ್ನು ಸಾಕ್ಷಿಗೆ ತೋರಿಸಲಾಯಿತು.) ಈಗ ತೋರಿಸಲಾದ ದಾಖಲೆಯಲ್ಲಿ ನನ್ನ ಸಹಿ ಇದ್ದು, ನೋಟಿನ ವಿವರಗಳನ್ನು ಬರೆಯಲಾಗಿದೆ. ದಾಖಲೆಯನ್ನು ಮುಮಾ-2, ನನ್ನ ಸಹಿಯನ್ನು ಮುಮಾ-2(ಎ) ಎಂದು ಗುರುತಿಸಲಾಯಿತು.

5. ನಾನು ಎಣಿಸಿದ ನೋಟುಗಳಿಗೆ ಬಣ್ಣ ಹಚ್ಚಿದರೆ ಹೇಗೆ ಆಗುತ್ತದೆ ಎಂದು ತೋರಿಸಿ ವಿವರಿಸಿದರು. ನೋಟುಗಳನ್ನು ಚಾಸಾ-1 ರ ಕೈಗೆ ಕೊಡಲಾಯಿತು. ನಾವೆಲ್ಲ ಸೇರಿ ಹಿರೇಮಣಕಟ್ಟಿ ಗ್ರಾಮ ಪಂಚಾಯ್ತಿಗೆ ಹೋದೆವು.

*(ಸಾಕ್ಷಿಯು ಸ್ವಂತ ಕಾರಣದ ನಿಮಿತ್ತ ಸಮಯ ಕೋರಿದ್ದರಿಂದ, ನ್ಯಾಯದ ಹಿತದೃಷ್ಟಿಯಿಂದ ಮುಂದೂಡಲಾಯಿತು.)*

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.